ಒ ಎಸ್ ನಂಃ **50/2016** ಡಿ.ಡಬ್ಲ್ಯುಃ **2**

<u>ದಿನಾಂಕಃ 05-08-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು</u>

<u>**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ-**</u>

ನಾನು ವಂಶವೃಕ್ಷ ಕೊಟ್ಟಿದ್ದೇನೆ. ಕಾನೇಶುಮಾರಿ ನಂಃ261, 262 ನಮ್ಮ ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಅದು ಹೆಚ್ ಎಂ ಮಲ್ಲಮ್ಮ ಮತ್ತು ಮಕ್ಕಳಿಗೆ ಸೇರಿದ್ದು ಎಂದರೆ ಸರಿಯಲ್ಲ. ಅವರ ಕುಟುಂಬದಲ್ಲಿ ವಿಭಾಗವಾದಾಗ ಲಿಂಗಮರಿಯಪ್ಪನಿಗೆ ಸದರಿ ಕಾನೇಶುಮಾರಿ ನಂಬರ್ ಗಳು ಬಂದಿರುತ್ತವೆಂದರೆ ಸರಿಯಲ್ಲ. ನಮ್ಮ ತಂದೆಗೆ ವಿಲ್ ಮುಖಾಂತರ ಕಾನೇಶುಮಾರಿ ನಂಃ 261 ಬಂದಿರುತ್ತದೆ. ಕೈ ತಪ್ಪಿನಿಂದ ಚಂದ್ರಶೇಖರಪ್ಪನಿಗೆ ನಮ್ಮ ಆಸ್ತಿ ಹೋಗಿರುತ್ತದೆ. ಕೈ ತಪ್ಪಿನಿಂದ ಹೋಗಿದೆ ಅಂತ ತೋರಿಸಲು ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿದಾರರು ಕಂದಾಯ ಕಟ್ಟಿದ್ದ ದಾಖಲೆ ಕೊಟ್ಟಿದ್ದೇನೆನ್ನುತ್ತಾರೆ. ಕಾನೇಶುಮಾರಿ ನಂಃ 261 ನಮ್ಮದೇ ಅಂತ ತೋರಿಸಲು ದಾಖಲೆ ಕೊಟ್ಟಿದ್ದೇನೆ. ಸಾಕ್ಷಿ ಮುಂದುವರೆದು 258 ರಿಂದ 262 ರವರೇಗಿನ ಕಾನೇಶುಮಾರಿ ನಂಬರ್ ಗಳು ನಮ್ಮವೇ ಆಗಿದ್ದು, ನಮ್ಮ ಸ್ವಾಧೀನತೆಯಲ್ಲಿವೆ ಅನ್ನುತ್ತಾರೆ. 258 ಮತ್ತು 259 ಬಗ್ಗೆ ಕ್ರಯಪತ್ರ ಕೊಟ್ಟಿದ್ದೇನೆ 260, 261 ನಮ್ಮ ಜೋಡಿ ಮನೆಯಾಗಿದ್ದು, 1956 ರಲ್ಲೇ ಕಟ್ಟಿದ್ದೇವೆನ್ನುತ್ತಾರೆ. 1995 ರಲ್ಲೋ 1997 ರಲ್ಲೋ ನಮ್ಮ ತಂದೆ ಚಂದ್ರಪ್ಪನವರಿಗೆ ವಿಲ್ ನಾಮೆ ಮಾಡಿದ್ದರು. ಚಂದ್ರಶೇಖರಪ್ಪನವರಿಗೆ ಕಾನೇಶುಮಾರಿ ನಂಬರ್ ತಪ್ಪಾಗಿ ಎಂದು ದಾಖಲಾಗಿತ್ತು ಅಂತ ನನಗೆ ಗೊತ್ತಿಲ್ಲ. ಚಂದ್ರಶೇಖರಪ್ಪನವರು ನಮ್ಮ ರಕ್ತ ಸಂಬಂಧಿ ಅಲ್ಲ ಎಂದರೆ ಸರಿ. ಜೋಡಿ ಮನೆ ಇದ್ದ ಬಗ್ಗೆ ಕಂದಾಯ ರಶೀದಿಗಳನ್ನು ಕೊಟ್ಟಿದ್ದೇನೆ. ಸಾಕ್ಷಿ ಮೊದಲಿನಿಂದಲೂ ನಾವು ಅಲ್ಲಿ ವಾಸವಿದ್ದೇವೆನ್ನುತ್ತಾರೆ.

ಕಾನೇಶುಮಾರಿ ನಂಃ 261 ಪೂರ್ವ-ಪಶ್ಚಿಮ 30 ½ ಉತ್ತರ ದಕ್ಷಿಣ 177 ಅಡಿ ವಿಸ್ತೀರ್ಣ ಇರುತ್ತದೆ. ಕಾನೇಶುಮಾರಿ ನಂಃ 262 ಪೂರ್ವ-ಪಶ್ಚಿಮ 24 ½ ಉತ್ತರ ದಕ್ಷಿಣ 177 ಅಡಿ ಇರುತ್ತದೆ. ಇದೇ ವಿಸ್ತೀರ್ಣವನ್ನು ತೋರಿಸಿ ವಿಭಾಗಪತ್ರದಲ್ಲಿ ಲಿಂಗಮರಿಯಪ್ಪನಿಗೆ ಹಂಚಿಕೆ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 17 ಗಜ ಉದ್ದ, 50 ಗಜ ಅಗಲ ಅಂತ ಉಲ್ಲೇಖ ಮಾಡಿದ್ದಾರೆಂದರೆ ಅಷ್ಟೊಂದು ಜಾಗ ಇಲ್ಲ ಅನ್ನುತ್ತಾರೆ. ನಾವು 261, 262 ಆಸ್ತಿಗಳನ್ನು ಅಳತೆ ಮಾಡಿಸಿದ್ದೇವೆ. ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಅಳತೆ ಮಾಡಿಸಿಲ್ಲ ಎಂದರೆ ಸರಿಯಲ್ಲ. ನಾನು

ಹೇಳಿರುವ ವಿಲ್ ನಾಮೆ ಕೊಟ್ಟಿ ವಿಲ್ ನಾಮೆ ಆಗಿರುತ್ತದೆಂದರೆ ಸರಿಯಲ್ಲ. ನನಗೆ ವಿಲ್ ನಾಮೆಗೆ ಮೊದಲೇ ವಿವಾದಿತ ಸ್ವತ್ತು ಲಿಂಗಮರಿಯಪ್ಪನಿಗೆ ಸೇರಿದ ಸ್ವತ್ತು ಅಂತ ಗೊತ್ತಿತ್ತು ಎಂದರೆ ಸರಿಯಲ್ಲ. ವಿಲ್ ನಾಮೆಗೂ ಮೊದಲಿನ ದಾಖಲೆಗಳ ಬಗ್ಗೆ ನಾನು ನೋಡಿರುವುದಿಲ್ಲ. ಖಾತೆ ಮಾಡುವಾಗ ಹಾಗೂ ಪ್ರೊಬೇಟರಿ ಸರ್ಟಿಫಿಕೇಟನ್ನು ಪಡೆದುಕೊಳ್ಳಬೇಕು ಎಂದರೆ ನನಗೆ ಗೊತ್ತಿಲ್ಲ. ಲಿಂಗಮರಿಯಪ್ಪನ ಆಸ್ತಿ ಲಟಾಯಿಸಲು ಸುಳ್ಳು ವಿಲ್ ನಾಮೆ ಸೃಷ್ಟಿ ಮಾಡಿದ್ದೇನೆಂದರೆ ಸರಿಯಲ್ಲ. ನಿಡಿ-33 ರಲ್ಲಿ ಕಾಣಿಸುವ ಸಹಿ ಹೆಚ್ ಎಂ ಚಂದ್ರಶೇಖರಪ್ಪ ನವರ ಸಹಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-33 ನ್ನು ಹೊರತುಪಡಿಸಿ ಹೆಚ್ ಎಂ ಚಂದ್ರಶೇಖರಪ್ಪನವರ ಸಹಿ ಇರುವ ಬೇರೆ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ. ಕಾನೇಶುಮಾರಿ ನಂಃ261 ನ್ನು ಅಕ್ರಮವಾಗಿ ಸೇರಿಸಿಕೊಂಡಿದ್ದೇವೆಂದರೆ ಸಾಕ್ಷಿ ಅದು ನಮ್ಮದೇ ಆಸ್ತಿಯಾಗಿರುತ್ತದೆನ್ನುತ್ತಾರೆ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**Sd/-**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.